# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1746 (1951)**

**ಸದಸ್ಯರ ಹೆಸರು : ಶ್ರೀ ಬಿ.ಜಿ.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಉತ್ತರಿಸಬೇಕಾದ ದಿನಾಂಕ : 24.03.2026**

**ಉತ್ತರಿಸಬೇಕಾದ ಸಚಿವರು : ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು**

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕಲಬುರಗಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಪಾರ್ಕ್‌ಗಳ ಸಂಖ್ಯೆ ಎಷ್ಟು ಹಾಗೂ ಇವುಗಳ ವಿಸ್ತೀರ್ಣವೆಷ್ಟು; | ಕಲಬುರಗಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಒಟ್ಟು 401 ಉದ್ಯಾನವನಗಳು ಇವೆ. ಅದರಲ್ಲಿ 194 ಅಧಿಸೂಚಿತ ಉದ್ಯಾನವನಗಳಿವೆ ಮತ್ತು 207 ಅಧಿಸೂಚಿತವಲ್ಲದ ಉದ್ಯಾನವನಗಳಿವೆ. (ಸದರಿ ಉದ್ಯಾನವನಗಳ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| (ಆ) | ಕಳೆದ 3 ವರ್ಷಗಳಲ್ಲಿ ಸದರಿ ಪಾರ್ಕ್‌ಗಳ ಅಭಿವೃದ್ಧಿಗಾಗಿ ಸರ್ಕಾರ ಬಿಡುಗಡೆ ಮಾಡಿರುವ ಅನುದಾನ ಎಷ್ಟು; ಮತ್ತು ಅಭಿವೃದ್ಧಿ ಪಡಿಸಿದ ಪಾರ್ಕ್‌ಗಳ ವಿವರ ಹಾಗೂ ಕಾಮಗಾರಿಗಳ ಸಹಿತ ವಿವರ ನೀಡುವುದು; | ಕಲಬುರಗಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ಉದ್ಯಾನವನಗಳನ್ನು 15ನೇ ಹಣಕಾಸು ಯೋಜನೆ, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಅನುದಾನ ಹಾಗೂ ಅಮೃತ 2.0 ಅನುದಾನಗಳಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದೆ. ವಿವರಗಳನ್ನು **ಅನುಬಂಧ-2, ಅನುಬಂಧ-3** ಮತ್ತು **ಅನುಬಂಧ-4** ರಲ್ಲಿ ನೀಡಲಾಗಿದೆ. |
| (ಇ) | ಈ ಪಾರ್ಕ್‌ಗಳ ನಿರ್ವಹಣೆಗೆ ಇರುವ ಮಾನದಂಡಗಳೇನು; ನಿರ್ವಹಣೆಯನ್ನು ಯಾವ ಸಂಸ್ಥೆಗೆ ವಹಿಸಲಾಗಿದೆ; ನಿರ್ವಹಣೆಗೆ ವಾರ್ಷಿಕ ಎಷ್ಟು ಹಣ ವ್ಯಯ ಮಾಡಲಾಗುತ್ತಿದೆ; ನಿರ್ವಹಣೆಗೆ ಬೇಕಾಗುವ ಹಣವನ್ನು ಸರ್ಕಾರ ನೀಡುತ್ತದೆಯೇ ಅಥವಾ ಮಹಾನಗರ ಪಾಲಿಕೆಯಿಂದ ಭರಿಸಲಾಗುತ್ತದೆಯೇ?(ವಿವರ ನೀಡುವುದು) | ನಗರದಲ್ಲಿರುವ ಪಾರ್ಕ್‌ಗಳ ನಿರ್ವಹಣೆಯನ್ನು ಸಾಮಾನ್ಯ ಮಾನದಂಡಗಳ ಪ್ರಕಾರ ಕೈಗೊಳ್ಳಲಾಗುತ್ತದೆ. ಇದರಲ್ಲಿ ಹಸಿರು ಮೈದಾನಗಳ ಸಂರಕ್ಷಣೆ, ಸಸಿಗಳ ನೆಡುವಿಕೆ ಮತ್ತು ಪಾಲನೆ, ನೀರಾವರಿ ವ್ಯವಸ್ಥೆ, ಸ್ವಚ್ಛತೆ, ಹಾಗೂ ನಡೆ ಪಥಗಳ ಸಂರಕ್ಷಣೆ ಮುಂತಾದವು ಒಳಗೊಂಡಿರುತ್ತವೆ.<br>ಪಾರ್ಕ್‌ಗಳ ನಿರ್ವಹಣೆಯನ್ನು ಸಂಬಂಧಿತ ಮಹಾನಗರ ಪಾಲಿಕೆಯ ತೋಟಗಾರಿಕೆ ವಿಭಾಗದ ಮೂಲಕ ಹೊರ ಗುತ್ತಿಗೆ ಆಧಾರದಲ್ಲಿ ಗಾರ್ಡನರ್ ಗಳನ್ನು ಟೆಂಡರ ಮುಖಾಂತರ ಮೆ\|\| ಡಿಟೆಕ್ಟವೆಲ್, ಬೆಂಗಳೂರು ರವರಿಂದ ಪಡೆಯಲಾಗಿದೆ.<br>ಸದರಿ ಉದ್ಯಾನವನಗಳ ನಿರ್ವಹಣೆಯನ್ನು ಪಾಲಿಕೆಯ ಸಾಮಾನ್ಯ ನಿಧಿಯಿಂದ ಹೊರಗುತ್ತಿಗೆ ಆಧಾರದ ಮೇಲೆ ಗಾರ್ಡನರ್‌ಗಳನ್ನು ಪಡೆದು ವಾರ್ಷಿಕ ಅಂದಾಜು ಮೊತ್ತ ರೂ. 49.20 ಲಕ್ಷಗಳಲ್ಲಿ ನಿರ್ವಹಣೆ ಮಾಡಲಾಗುತ್ತಿದೆ. |

ನಅಇ 33 ಎಸಿಜಿ 2026(ಇ)

(ಬಿ. ಎಸ್. ಸುರೇಶ)
ನಗರಾಭಿವೃದ್ಧಿ ಹಾಗೂ ನಗರ ಯೋಜನೆ
ಸಚಿವರು.